# ಹುಲ್ಲು ಕಲಿಸುವ ಪಾಠ

ಸಂಸ್ಕೃತ ಭಾಗವತದಲ್ಲಿ ಅವಧೂತನೊಬ್ಬನನ್ನು ಕುರಿತು ಧ್ವನಿಪೂರ್ಣವಾದ ಆಖ್ಯಾನವೊಂದಿದೆ. ನಮ್ಮ ಸುತ್ತಲಿನ ವಸ್ತು ಸಂಗತಿಗಳಿಂದ ನಾವು ಪಡೆಯಬಹುದಾದ ಜೀವನ ವಿವೇಕದ ಪಾಠಗಳನ್ನು ಕಥನಾತ್ಮಕವಾಗಿ ಅದು ನಮ್ಮ ಮುಂದಿಡುತ್ತದೆ. ಈ ಕಥನದಲ್ಲಿ ಬರುವ ಅವಧೂತ ತಾನು ಸಂಧಿಸುವ ಬೇಟೆಗಾರ, ಬೆಸ್ತ, ಹದ್ದು, ಬಕಪಕ್ಷಿ, ಜೇನು ನೊಣ ಇತ್ಯಾದಿಗಳಿಂದ ಬೇರೆ ಬೇರೆ ಬಗೆಯ ಜೀವನ ಪಾಠಗಳನ್ನು ಕಲಿಯುತ್ತಾನೆ. ಅತ್ಯಂತ ಕ್ಷುಲ್ಲಕ ವಸ್ತುವೆಂದು ನಾವು ಪರಿಗಣಿಸುವ ಹುಲ್ಲನ್ನೂ ಈ ಗುಂಪಿಗೆ ಸೇರಿಸಬಹುದೆನ್ನಿಸುತ್ತದೆ.

ಹುಲ್ಲನ್ನು ಸಸ್ಯ ಸಮೂಹದಲ್ಲಿ ಕೆಳಸ್ತರದ್ದು ಎಂಬುದು ಸಾಮಾನ್ಯವಾಗಿ ನಮ್ಮೆಲ್ಲರ ಭಾವನೆ. ಬಹುಜನರ ದೃಷ್ಟಿಯಲ್ಲಿ ಹುಲ್ಲು ಎಂಬುದು ಒಂದು ಅನಪೇಕ್ಷಿತ ಸಸ್ಯ. ತಾನು ಕಷ್ಟಪಟ್ಟು ಬೆಳೆಸಿದ ತರಕಾರಿ ಗಿಡಗಳ ಜೊತೆಗೋ, ಹೂಪಾತಿಯಲ್ಲೋ, ಹೊಲ ಗದ್ದೆ ತೋಟಗಳಲ್ಲೋ– ಎಲ್ಲೆಂದರಲ್ಲಿ ಕಾಣಿಸಿಕೊಳ್ಳುವ ಹುಲ್ಲನ್ನು ಮನುಷ್ಯ ಸಹಿಸುವುದಿಲ್ಲ. ಅದನ್ನು 'ಕಳೆ' ಎಂದು ತಿರಸ್ಕಾರದಿಂದ ಕಂಡು, ಕಿತ್ತೆಸೆಯುತ್ತಾನೆ. ಆದರೆ ಹುಲ್ಲು ಮಾತ್ರ ಈ ಎಲ್ಲ ತಿರಸ್ಕಾರ, ಪ್ರತಿರೋಧಗಳನ್ನು ಎದುರಿಸಿ, ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ. ಎಂಥದೇ ಸಂದರ್ಭದಲ್ಲೂ ಬದುಕುವ ಸ್ಥೈರ್ಯ, ಬದುಕನ್ನು ಮುಂದುವರಿಸಲೇಬೇಕೆಂಬ ಛಲ– ಈ ಗುಣಗಳಿಗೆ ಹುಲ್ಲು ಎಂಬುದೊಂದು ಸಮರ್ಥ ಉದಾಹರಣೆ. ಬದುಕಿನ ಹೋರಾಟದಲ್ಲಿ ಸೋಲಿನ ಮನೋಭಾವವನ್ನು ಬೆಳೆಸಿಕೊಳ್ಳದ, ನಿರಾಶೆ, ಹತಾಶೆಗಳಿಗೆ ಅವಕಾಶ ಕೊಡದ ಧೀರ ನಿಲವು ಹುಲ್ಲಿನದು, ಅದರಲ್ಲಿ ಎಂದೆಂದಿಗೂ ಕ್ಷೀಣಗೊಳ್ಳದ ಜೀವಧ್ವನಿ ಮಿಡಿಯುತ್ತಲೇ ಇರುತ್ತದೆ. ಬೇಸಿಗೆಯ ಬಿಸಿಲ ಪ್ರಖರತೆಯಿಂದ ಒಣಗಿಯೋ, ದನಕರು ಕುರಿ ಮೇಕೆಗಳಿಗೆ ಆಹಾರವಾಗಿಯೋ ಸ್ವಲ್ಪ ಸಮಯ ಮರೆಯಾಗುವ ಹುಲ್ಲು ಮುಂಗಾರು ಮಳೆ ಬಿದ್ದೊಡನೇ ಸಕಲ ಜೀವನೋತ್ಸಾಹದಿಂದ ಪ್ರತ್ಯಕ್ಷವಾಗುತ್ತದೆ; ಬದುಕನ್ನು ಸಂಭ್ರಮದಿಂದ ಆಸ್ವಾದಿಸುತ್ತದೆ. ಕವಿ ವ್ಹಿಟ್ ಮನ್ ಹೇಳಿದಂತೆ 'ಐ ಸೆಲೆಬ್ರೇಟ್ ಮೈ ಸೆಲ್ಫ್' ಎಂದು ಘೋಷಿಸುತ್ತದೆ.

ಮನುಷ್ಯನ ಕೋಪ ಅಸಹನೆಗಳಿಗೆ ಮಣಿಯದೆ, ಸಾಧ್ಯವಾದಲ್ಲೆಲ್ಲಾ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುವ ಹುಲ್ಲು ಅವಿನಾಶಿ ಮಾತ್ರವಲ್ಲ, ಅಜೇಯವೂ ಹೌದು. ಗಾಳಿ ಬೆಳಕು ಪ್ರವೇಶಿಸಲು ಅಂಜುವ ಬಂಡೆಗಳ ಇಕ್ಕಟ್ಟುಗಳಲ್ಲೂ ಕಾಣಿಸಿಕೊಳ್ಳುವ ಹುಲ್ಲು ತನ್ನ ಚಿರಂಜೀವತ್ವವನ್ನು ಸಾಬೀತುಪಡಿಸುತ್ತದೆ; ಕಷ್ಟ ಸಹಿಷ್ಣುತೆಗೆ ಸಂಕೇತವಾಗುತ್ತದೆ; ಬದುಕಿನ ಚಿರಂತನತೆಗೆ ಪ್ರತೀಕವಾಗುತ್ತದೆ. ಜಾನ್ ರಸ್ಕಿನ್ ಎಂಬ ಇಂಗ್ಲಿಷ್ ಚಿಂತಕ ಹುಲ್ಲನ್ನು ಕುರಿತು ಬರೆದ ಪ್ರಬಂಧದಲ್ಲಿ ಹೀಗೆ ಹೇಳುತ್ತಾನೆ: 'ಮನುಷ್ಯ ಸಂದರ್ಭಕ್ಕೆ ಸಂಗತವಾಗಬಲ್ಲ ಹುಲ್ಲಿನ ವಿಶಿಷ್ಟ ಗುಣಗಳೆಂದರೆ ಅದರ ವಿನಯ ಮತ್ತು ಹರ್ಷ ಪ್ರವೃತ್ತಿ. ಎಲ್ಲರ ಕಾಲ್ತುಳಿತಕ್ಕೆ ಸಿಕ್ಕುವುದಕ್ಕಾಗಿ, ಪ್ರಾಣಿಗಳಿಗೆ ಆಹಾರವಾಗುವುದಕ್ಕಾಗಿ ತನ್ನ ಸೃಷ್ಟಿಯಾಗಿದೆ ಎಂಬ ಅದರ ನಿಲವು ಅದರ ವಿನಯಕ್ಕೆ ಸಂಬಂಧಿಸಿದ ಸಂಗತಿ. ಎಲ್ಲ ಬಗೆಯ ಹಿಂಸೆಗೂ, ಸಂಕಟಕ್ಕೂ ತುತ್ತಾಗಿಯೂ ಅದು ಸಂತುಷ್ಟವಾಗಿಯೇ ಇರುತ್ತದೆ ಎಂಬುದು ಅದರ ಹರ್ಷ ಪ್ರವೃತ್ತಿಯನ್ನು ಸೂಚಿಸುತ್ತದೆ. ನೀವು ಅದನ್ನು ಕತ್ತರಿಸಿ; ಅದು ತನ್ನ ಸುಳಿಗಳನ್ನು ಎಷ್ಟೋಪಾಲು ಹೆಚ್ಚಿಸಿಕೊಳ್ಳುತ್ತದೆ. ಅದನ್ನು ತುಳಿಯಿರಿ; ಅದು ಇನ್ನಷ್ಟು ಹಿತಕರವಾದ ಕಂಪನ್ನು ಸೂಸುತ್ತದೆ; ಸುತ್ತ ಇಬ್ಬನಿ ಆವರಿಸಿದ್ದಾಗಲೂ ಇನ್ನಷ್ಟು ಲವಲವಿಕೆಯಿಂದ ಸೊಗಯಿಸುತ್ತದೆ...'

ನಮ್ಮ ಹಿರಿಯ ಕವಿ ಚನ್ನವೀರ ಕಣವಿಯವರು 'ಹುಲ್ಲು' ಎಂಬ ಸೊಗಸಾದ ಕವಿತೆಯೊಂದನ್ನು ಬರೆದಿದ್ದಾರೆ. ಅದರಲ್ಲಿ ಹುಲ್ಲನ್ನು ನೆಪ ಮಾಡಿಕೊಂಡು ಪ್ರಕೃತಿ ಮತ್ತು ನಾಗರಿಕತೆಗಳ ನಡುವಣ ತಿಕ್ಕಾಟವನ್ನು ಸೂತ್ರ ರೂಪದಲ್ಲಿ ಕವಿ ಪ್ರಸ್ತಾಪಿಸಿದ್ದಾರೆ. 'ಮಳೆಗೆ ಹುಲ್ಲು ಮೊಳೆಯುವುದು ಮೂಲ ಪ್ರವೃತ್ತಿ, ನಿಸರ್ಗ; ಕಳೆ ತೆಗೆದು ಬಿತ್ತಿ ಬೆಳೆಯುವುದು ನಾಗರಿಕ ಮಾರ್ಗ' ಎನ್ನುತ್ತಾರೆ ಕಣವಿ. ನಾಗರಿಕತೆಯೆಂಬುದು ಪ್ರಕೃತಿಯ ಬುನಾದಿಯ ಮೇಲೆಯೇ ನಿಂತಿದೆ. ಆದರೆ ಮನುಷ್ಯ ನಾಗರಿಕನಾಗುವ ಭರಾಟೆಯಲ್ಲಿ ಪ್ರಕೃತಿಗೆ ಹಾನಿಯುಂಟು ಮಾಡುತ್ತಿದ್ದಾನೆ. ಮನುಷ್ಯ ಹೆಚ್ಚು ಹೆಚ್ಚು ನಾಗರಿಕ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸಿದಾಗೆಲ್ಲಾ ಪರಿಸರದ ಮೇಲೆ ಅವನ ದೌರ್ಜನ್ಯ ಹೆಚ್ಚುತ್ತಲೇ ಹೋಗುತ್ತದೆ. ನಾಗರಿಕತೆಗೆ ಮೂಲಾಧಾರವಾಗಿರುವ ಪ್ರಕೃತಿಯನ್ನು ನಾಶ ಮಾಡುತ್ತಿರುವ ಮನುಷ್ಯನಿಗೆ ತನ್ನನ್ನೇ ತಾನು ನಾಶ ಮಾಡಿಕೊಳ್ಳುತ್ತಿದ್ದೇನೆಂಬ ಅರಿವು ಕಾಣಿಸಿಕೊಳ್ಳದಿರುವುದು ಬಹುದೊಡ್ಡ ವಿಪರ್ಯಾಸವೆನ್ನಬೇಕು!

■ ವೈನತೇಯ

## ಮಾತೇ ಮುತ್ತು

★ ಆತ್ಮಸಂಯಮದಿಂದ ಕೂಡಿದ 'ವಿವೇಕ', ವಿನಯದಿಂದ ಕೂಡಿದ 'ವಿದ್ಯೆ', ಸರಳತೆಯಿಂದ ಕೂಡಿದ 'ಅಧಿಕಾರ' –ಇವು ಮಹಾತ್ಮರ ಲಕ್ಷಣ.

–ಸುಭಾಷಿತ

★ ವ್ಯಥೆಪಡಲು ಸಾವಿರಾರು ವಿಷಯಗಳೂ, ದುಃಖಿಸಲು ನೂರಾರು ಸಂದರ್ಭಗಳೂ ಪ್ರತಿದಿನವೂ ಒದಗುತ್ತವೆ. ಅವು ಮೂಢನಿಗೆ, ಪಂಡಿತನಿಗಲ್ಲ.

–ಮಹಾಭಾರತ

★ ಶರೀರವು ಅಸ್ಥಿರವೆಂದರಿತು ಯಾವನು ತಪೋನಿಷ್ಠೆಯಿಂದ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳುವುದಿಲ್ಲವೋ ಆ ಮೂಢನು ಮೃತನಾದ ಮೇಲೆ ತನ್ನ ದುಸ್ಥಿತಿಗೆ ತಾನೇ ಮರುಗಬೇಕಾಗುತ್ತದೆ.

–ರಾಮಾಯಣ

★ ಆರು ಕಿವಿಗಳಿಗೆ ಬಿದ್ದ ಮಾತು ರಟ್ಟಾಗುತ್ತದೆ. ಆದರೆ ನಾಲ್ಕು ಕಿವಿಗಳಿಗೆ ಬಿದ್ದುದು ಗಟ್ಟಿಯಾಗಿ ಗುಟ್ಟಾಗಿರುತ್ತದೆ. ಆದ್ದರಿಂದ ಬುದ್ಧಿವಂತನಾದವನು ಪ್ರಯತ್ನವನ್ನೆಲ್ಲಾ ಮಾಡಿ ಆರು ಕಿವಿಗಳನ್ನು ತಪ್ಪಿಸಬೇಕು.

–ಪಂಚತಂತ್ರ

★ ಅಡುಗೆ ಹಾಳಾದರೆ ಒಂದು ದಿನ ನಷ್ಟ. ಬೆಳೆ ಹಾಳಾದರೆ ಒಂದು ವರ್ಷ ನಷ್ಟ. ವಿದ್ಯಾಭ್ಯಾಸ ಹಾಳಾದರೆ ಇಡೀ ಬದುಕು ಹಾಳು.

–ಸರ್ವಾಂಟಿಸ್

★ ಕಲಿಕೆ ಮತ್ತು ಆಲೋಚನೆಯಿಂದ ಸಿಗುವ ಸಂತೋಷ– ನಾವು ಇನ್ನಷ್ಟು ಆಲೋಚಿಸುವಂತೆ ಮತ್ತು ಕಲಿಯುವಂತೆ ಮಾಡುತ್ತದೆ.

–ಅರಿಸ್ಟಾಟಲ್

★ ಯಾವುದಾದರೊಂದು ಪ್ರವೃತ್ತಿಯಲ್ಲಿ ತೊಡಗಿಸಿಕೊಂಡು ಅದನ್ನು ಪೂರ್ಣಗೊಳಿಸುವವನು ಪುರಸ್ಕಾರಕ್ಕೆ ಯೋಗ್ಯನಾಗಿರುತ್ತಾನೆ.

–ಎಮರ್ಸನ್

★ ಅಜ್ಞಾನಿಯನ್ನು ಕಷ್ಟಪಟ್ಟು ಪ್ರಸನ್ನಚಿತ್ತನನ್ನಾಗಿ ಮಾಡಬಹುದು. ಆದರೆ ಅರ್ಧ ತಿಳಿವಳಿಕೆಯ ಮನುಷ್ಯನನ್ನು ಸಂತೋಷಗೊಳಿಸುವುದು ಬ್ರಹ್ಮನಿಂದಲೂ ಆಗದು.

–ಭರ್ತೃಹರಿ

★ ನುಡಿ ನಡೆವ ಕಾಲದಲ್ಲಿ ದಾನಧರ್ಮ ಮಾಡದಿದ್ದರೆ, ಅಡವಿಯೊಳಗೆ ಕೆರೆ ತುಂಬಿ ಬತ್ತಿದಂತೆ.

–ಕನಕದಾಸ

★ ಸ್ವಾತಂತ್ರ್ಯ ಸದಾ ಶಕ್ತಿಯ ಜೊತೆಗಿರುತ್ತದೆ.

–ಸುಭಾಷ್ ಚಂದ್ರ ಬೋಸ್

★ ಜ್ಞಾನಕ್ಕೆ ಮಾತ್ರ ಅಜ್ಞಾನವನ್ನು ಹೊಡೆದೋಡಿಸುವ ಶಕ್ತಿ ಇದೆ.

–ಶಂಕರಾಚಾರ್ಯ

★ ಆತ್ಮ ಅಮರ. ಅದಕ್ಕೆ ಹುಟ್ಟು, ಸಾವು ಇಲ್ಲ. ಅದು ನಿತ್ಯ, ಅನಾದಿ. ದೇಹಕ್ಕೆ ಮೃತ್ಯು, ಆತ್ಮಕ್ಕೆ ಅಲ್ಲ.

–ಭಗವದ್ಗೀತೆ

★ ಕೋಪ ಬಂದಾಗ ಯಾವುದೇ ಪತ್ರಕ್ಕೆ ಉತ್ತರ ಕೊಡುವ ಪ್ರಯತ್ನ ಮಾಡಬೇಡ.

–ಮದರ್ ಥೆರೇಸಾ

★ ಪ್ರಜೆಗಳ ಕೂಗು ರಾಜನಿಗೆ ಕೇಳಿಸದಿದ್ದರೆ, ಅವನು ಆದರ್ಶ ರಾಜನಾಗಲಾರ.

–ಪ್ರೇಮಚಂದ್